# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ. ರೇವಣಸಿದ್ದಪ್ಪ, ಬಿನ್ ಪಂಪಾಪತೆಪ್ಪ, ಕೋಲ್ಕಾರ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿ ಇವರ ಲೋಕಾಯುಕ್ತ ಟ್ರಾಪ್ ಪ್ರಕರಣ -ಶಿಸ್ತು ಕ್ರಮ ಕುರಿತು.

## ಓದಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಕೃತೋಇ 55 ಕೃಪವಿ 2010, ದಿನಾಂಕ: 06-10-2010.

## ಪ್ರಸ್ತಾವನೆ:-

ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ, ಕೋಲ್ಕಾರ, ಕೃಷಿ ಅಧಿಕಾರಿ, [ಅಮಾನತ್ತಿನಲ್ಲಿರುವ] ಇವರು ಈ ಹಿಂದೆ ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಗಂಗಾವತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಶ್ರೀ ರಾಘವೇಂದ್ರ ಇಂಜಿನಿಯರಿಂಗ್, ವರ್ಕ್ಸನ ಮ್ಯಾನೇಜರ್ ಶ್ರೀ ಶ್ರೀನಿವಾಸ ಬಿನ್ ಸತ್ಯನಾರಾಯಣ, ಡ್ಯಾಡಿ ಕಾಲೋನಿ ವಾಸಿ ರಾಯಚೂರು, ಇವರಿಂದ,ಅಕ್ರಮ ಸಂಭಾವನೆ ಪಡೆಯುವಾಗ ಲೋಕಾಯುಕ್ತದ ಅಧಿಕಾರಿಗಳಿಗೆ ಸಿಕ್ಕಿಬಿದ್ದ ಪ್ರಯುಕ್ತ ಅವರನ್ನು ಅವರ ಮೇಲಿನ ಲೋಕಾಯುಕ್ತದ ವಿಚಾರಣೆ ಬಾಕಿಯಿರಿಸಿ, ಮೇಲೆ ಓದಲಾದ ದಿನಾಂಕ 06-10-2010ರ ಸರ್ಕಾರದ ಆದೇಶದಲ್ಲಿ ಸೇವೆಯಿಂದ ಅಮಾನತ್ತಗೊಳಿಸಲಾಗಿತ್ತು.

ಸದರಿ ಅಧಿಕಾರಿಯವರನ್ನು ಸೇವೆಯಿಂದ ಅಮಾನತ್ತಗೊಳಿಸಿ, ಸುಮಾರು, 9 ತಿಂಗಳು ಕಳೆದಿರುವುದರಿಂದ, ಪ್ರಸ್ತುತ ಸದರಿಯವರ ಅಮಾನತ್ತನ್ನು ಪುನರ್ ಪರಿಶೀಲಿಸಿದ ಸರ್ಕಾರ ಅವರ ಮೇಲಿರುವ ಲೋಕಾಯುಕ್ತ ಪ್ರಕರಣದ ವಿಚಾರಣೆಯನ್ನು ಬಾಕಿ ಇಟ್ಟು, ಅವರ ಅಮಾನತ್ತನ್ನು ತೆರವುಗೊಳಿಸಿ, ಸೇವೆಯಲ್ಲಿ ಪುನರ್ ಸ್ಥಾಪಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 55 ಕೃಪವಿ 2010,**
**ಬೆಂಗಳೂರು, ದಿನಾಂಕ: 5ನೇ ಆಗಸ್ಟ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ ಕೋಲ್ಕಾರ ಕೃಷಿ ಅಧಿಕಾರಿ, ಇವರನ್ನು ಅವರ ಮೇಲಿನ ಲೋಕಾಯುಕ್ತ ಪ್ರಕರಣದ ವಿಚಾರಣೆಯನ್ನು ಬಾಕಿ ಇಟ್ಟು, ಕೂಡಲೇ ಜಾರಿಗೆ ಬರುವಂತೆ ಅಮಾನತ್ತಿನಿಂದ ತೆರವುಗೊಳಿಸಿ, **''ರೈತ ಸಂಪರ್ಕ ಕೇಂದ್ರ, ಗೋರೆಬಾಳು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಿಂಧನೂರು ತಾಲ್ಲೂಕು, ರಾಯಚೂರು ಜಿಲ್ಲೆ ,,** ಇಲ್ಲಿಗೆ ಮುಂದಿನ ಆದೇಶದವರೆಗೆ ಸೇವೆಯಲ್ಲಿ ಪುನರ್ ಸ್ಥಾಪಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಹಿ) 5/8/11
[ಮಂಜುನಾಥ ಪಾಟೀಲ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
5/8/11

ಇವರಿಗೆ:-

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.

-ಮುಂದಿನ ಪುಟಕ್ಕೆ

29

2) ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು.

3) ಅಪರ ಪೋಲಿಸ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4) ಜಂಟಿ ಕೃಷಿ ನಿರ್ದೇಶಕರು, ರಾಯಚೂರು.

5) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

6) ಸಹಾಯಕ ಕೃಷಿ ನಿರ್ದೇಶಕರು, ಸಿಂಧನೂರು, ರಾಯಚೂರು ಜಿಲ್ಲೆ.

7) ಶ್ರೀ ರೇವಣಸಿದ್ದಪ್ಪ ಬಿನ್ ಪಂಪಾಪತೆಪ್ಪ, ಕೋಲ್ಕರ, ಕೃಷಿ ಅಧಿಕಾರಿ (ಕೃಷಿ ಆಯುಕ್ತರ ಮೂಲಕ)

8) ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಕಾರ್ಯದರ್ಶಿ,

9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.